**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ. 3268/2023**

ಸಿ.ಡಬ್ಲ್ಯೂ -02

ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ಮರಿಬೆಟ್ಟಸ್ವಾಮಿ

ತಂದೆಯ ಹೆಸರು :- ನಂಜಯ್ಯ

ವಯಸ್ಸು :- 46 ವರ್ಷ

ಉದ್ಯೋಗ :- ವ್ಯವಸಾಯ

ವಾಸ :- ಸಿದ್ದಯ್ಯನಕೆರೆಪಾಳ್ಯ

**ಸಾಕ್ಷಿಗೆ ದಿಃ 09.06.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ದಿಃ 08.08.2023 ರಂದು ಬೆಳಿಗ್ಗೆ 9 ಗಂಟೆಯ ಸಮಯದಲ್ಲಿ ಚಂದಯ್ಯ ಜಮೀನಿನ ಹತ್ತಿರ ಎಮ್ಮೆಗಳಿಗೆ ನೀರನ್ನು ಕುಡಿಸುತ್ತಿದ್ದಾಗ ಸಿದ್ದಯ್ಯನಕೆರೆಪಾಳ್ಯದಿಂದ ಹೊಟ್ಟೆತಿಮ್ಮಯ್ಯಪಾಳ್ಯ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ಇರುವ ನೀರಿನ ತೊಟ್ಟಿಯಲ್ಲಿ ಎಮ್ಮೆಗಳಿಗೆ ನೀರನ್ನು ಕುಡಿಸುತ್ತಿದ್ದಾಗ ಸಿದ್ದಯ್ಯಕೆರೆಪಾಳ್ಯದಿಂದ ಚಾಸಾ 1 ಅವರ ಜಮೀನಿನ ಕಡೆ ಹೋಗುತ್ತಿದ್ದು ಅದೇ ಸಮಯಕ್ಕೆ ಎದುರುಬದಿಯಿಂದ ಆರೋಪಿ ಬಂದಿದ್ದು ಚಾಸಾ 1 ಅವರು ಆರೋಪಿಗೆ ಜಮೀನಿಗೆ ತಿರುಗಾಡುವ ದಾರಿ ವಿಚಾರವಾಗಿ ಮತ್ತು ಟ್ರಾಕ್ಟರ್ ದಾರಿ ವಿಚಾರವಾಗಿ ಏಕೆ ತೊಂದರೆ ಕೊಡುತ್ತೀಯಾ ಎಂದು ಕೇಳಿದಕ್ಕೆ ಆರೋಪಿ ಬೋಳಿ ಮಗನೇ ಸೂಳೆ ಮಗನೇ ನಿನಗೇಕೆ ದಾರಿ ಬಿಡಬೇಕು ಎಂದು ಕೂಡಗೋಲನ್ನು ಹಿಡಿದುಕೊಂಡು ಚಾಸಾ 1 ಅವರ ಬಲಕಣ್ಣಿನ ಹುಬ್ಬಿನ ಮೇಲೆ, ಮೂಗಿನ ಮತ್ತು ತಲೆಯ ಮುಂಬಾಗದ ಮೇಲೆ ಹೊಡೆದಿರುತ್ತಾರೆ. ನಾನು ಕೂಡಲನ್ನು ತಗೆದುಕೊಂಡು ಬಿಸಾಕಿ ಹೋಗುತ್ತಿದ್ದಾಗ ಪುನಃ ಆರೋಪಿ ಕಲ್ಲನ್ನು ತಗೆದುಕೊಂಡು ಚಾಸಾ 1 ಅವರ ತೊಡೆಗೆ ಹೊಡೆದಿರುತ್ತಾರೆ. ನೀನು ದೂರನ್ನು ನೀಡಲು ಹೋದರೆ ನಿನ್ನನ್ನು ಕತ್ತರಿಸಿ ಹಾಕುತ್ತೇನೆಂದು ಜೀವ ಬೆದರಿಕೆ ಹಾಕಿರುತ್ತಾರೆ. ನಾನು ಚಾಸಾ 1 ಅವರನ್ನು ಹು.ದುರ್ಗ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿರುತ್ತೇನೆ.

ನಂತರ ಚಾಸಾ 1 ಅವರು ಪೋಲಿಸ ಠಾಣೆಗೆ ದೂರನ್ನು ನೀಡಿರುತ್ತಾರೆ. ನಾನು ಪಿಟನೆ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ. ಆರೋಪಿ ಮತ್ತು ಮು. ಮಾ. ಗಳನ್ನು ಗುರುತಿಸುತ್ತೇ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**